(SRI B. L. GOWDA)

Rs. 1,06,000 which will supply 5 gallons of water per head per day to the 30,000 strong population residing in Rabakavi-Banahatti. The Rabakavi-Banahatti Town Municipal Council has already accepted this scheme and is making preparations for raising loans. The scheme is likely to be completed in about four weeks or even earlier.

There are no complaints so far regarding scarcity of water in any of the other villages on the bank of Krishna river in Jamkhandi Taluka. Alternative steps will be taken by Government soon after hearing from the Deputy Commissioner, Bijapur, if nead be.

ಶ್ರೀ ಸದಾಶಿವಪ್ಪ ಪಾಟೀಲ್.—ಕುಡಿಯುವ ನೀರಿನ ಬಾವಿಗಳಿಂದ ನೀರನ್ನು ಪೈಪ್‌ಗಳ ಮೂಲಕ ಒದಗಿಸರಾಗುತ್ತದೆ ಎಂದು ಹೇಳಿದ್ದೀರಿ. ಇದಕ್ಕಾಗಿ ಎಸ್ಟಿಮೇಟ್ ತಯಾರಾಗಿದೆ ಎಂದು ಕೂಡ ಹೇಳಿದ್ದೀರಿ. ಈ ಕೆಲಸ ಪ್ರಾರಂಭವಾಗಿ ಮುಗಿಯಬೇಕಾದರೆ ಬಹಳ ಕಾಲವಾಗುತ್ತದೆ. ಬೇಸಿಗೆಯಲ್ಲಿ ನೀರನ್ನು ನರಬರಾಜು ಮಾಡುವುದಕ್ಕೆ ಏನು ಕ್ರಮ ಕೈಗೊಂಡಿದ್ದೀರಿ?

ಶ್ರೀ ಬಿ. ಎಲ್. ಗೌಡ.—ಎಸ್ಟಿಮೇಟ್ ಮಂಜೂರಾಗಿ ಕೆಲಸ ಪ್ರಾರಂಭವಾಗಿದೆ. ಇಂಜಿನಿಯರುಗಳಿಗೆ ಕೆಲಸವನ್ನು ಜಾಗ್ರತೆ ಮಾಡಬೇಕೆಂದು ಹುಕುಂ ಹೋಗಿದೆ. ಇನ್ನು 2-3 ವಾರಗಳಲ್ಲಿ ಕೆಲಸ ಮುಗಿದುಹೋಗುತ್ತದೆ.

Fourteenth Report of the Business Advisory Committee Report

Mr. SPEAKER.—I beg to present the Fourteenth Report of the Business Advisory Committee.

Mr. DEPUTY SPEAKER.—I beg to move :

"That the House agrees with the Fourteenth Report of the Business Advisory Committee."

Sri L. SRIKANTAIAH (Nanjangud).—I have every respect to the Report presented by the Business Advisory Committee. Hitherto we were under the impression that every Saturday was a holiday followed by a Sunday. I have no objection to the Committee's making the present holidays of Saturdays and Sundays as working days. But, on the assumption that Saturdays and Sundays are holidays, we have fixed up our programmes and other engagements. If all of a sudden, the programme is altered, our programme will be dislocated. I think, we all owe an obligation to the constituency members and we have to fulfil that. If Saturday the 22nd, is made a working day, how are we going to accommodate ourselves? Just like A or B are answerable to somebody, we are answerable to our constituency people. I do not mean to say that I am showing any disrespect to the hon. Members of the Business Advisory Committee. Therefore, before a dicision is taken, it is better that consensus of the members is also taken, so that we can adjust our items of work or engagements. The present Report has come as a bolt from the blue. I do not know how to adjust to this altered programme. I leave it to the kind discretion of the Chair.

Sri AZEEZ SAIT.—Regarding this Report, I would like to say a few words. I may not be mistaken on either Side. The members of the Business Advisory Committee are the leaders of various parties, no doubt. But, while deciding about the business of the House, the difficulties of the other members of the House should also be taken into consideration. ಬೆಳಿಗ್ಗೆ ಮಧ್ಯಾಹ್ನ ಮತ್ತು ರಾತ್ರಿ 8 ಗಂಟೆಯವರೆಗೆ ಈ ರೀತಿ ಸಭೆಯನ್ನು ಮುನಿಸಿಪಾಲಟಿಯವರು ಸಹ ನಡೆಸುವುದಿಲ್ಲ. ಶನಿವಾರ ಸಭೆ ನಡೆಯುವುದಿಲ್ಲ ಎಂದು ಒಂದು ಸಾರಿ ಹೇಳುವುದು, ಇನ್ನೊಂದು ಸಾರಿ ಶನಿವಾರ ನಡೆಯುತ್ತದೆ ಎಂದು ಹೇಳುವುದು. ಈ ರೀತಿ ಆಗಾಗ್ಗೆ ಬದಲಾವಣೆ ಮಾಡುತ್ತಿರುತ್ತಾರೆಂದು ನಾನು ತಿಳಿದಿರಲಿಲ್ಲ. ಹಿಂದೆ ಈ ಸಭೆಯಲ್ಲಿ ವಿರೋಧಪಕ್ಷದವರು 50 ಜನ ಇದ್ದರು. ಈಗ 90 ಜನ ಇದ್ದಾರೆ. ಹಿಂದೆ ಮಾನ್ಯ ಸದಸ್ಯರುಗಳು ಮಾತನಾಡುವುದಕ್ಕೆ ಎಷ್ಟು ಸಮಯ ಇಟ್ಟಿದ್ದರೋ ಅಷ್ಟೇ ಸಮಯವನ್ನು ಈಗಲೂ ಇಟ್ಟಿದ್ದಾರೆ. ಅದು ಸರಿಯಲ್ಲ. ಟೈಮನ್ನು ಜಾಸ್ತಿ ಮಾಡಬೇಕು. ಶನಿವಾರ ಮತ್ತು ಭಾನುವಾರ ಸಭೆ ಸೇರುವುದಿಲ್ಲವಾದಕಾರಣ ಬಾಕಿ ದಿನಗಳಲ್ಲಿ 1 ರಿಂದ 7 ಗಂಟೆಯವರೆಗೆ ಸಭೆ ನಡೆಸಬೇಕೆಂದು ತೀರ್ಮಾನ ಮಾಡಿ ಈಗ ರಾತ್ರಿ 9 ಗಂಟೆಯವರೆಗೆ ಸಭೆ ನಡೆಸಿ ನಮ್ಮ ಜೀವವನ್ನು ತೆಗೆಯುತ್ತಿದ್ದಾರೆ. ಈಗ ಬಿಜಿನೆಸ್ ಅಡ್ವೈಸರಿ ಕಮಿಟಿಯವರು ಮತ್ತೆ ಈ ಬಗ್ಗೆ ಏನು ತೀರ್ಮಾನ ಮಾಡಿದ್ದಾರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ ಮತ್ತು ಅದಕ್ಕೆ ಮಾನ್ಯತೆ ಇಲ್ಲ.

ಶ್ರೀ ಎಸ್. ಶಿವಪ್ಪ.—ಸ್ವಾಮಿ, ಮಾನ್ಯ ಸದಸ್ಯರು ಹೇಳುವುದರಲ್ಲಿ ಸ್ವಲ್ಪ ಕಾರಣವೂ ಇದೆ. ಶನಿವಾರ ನಾವು ಸಭೆಯಲ್ಲಿ ಕುಳಿತುಕೊಳ್ಳಕೂಡದು ಎಂದು ಒಂದು ನಿಯಮ ಮಾಡಿರುವುದರಿಂದ ಬಡ್ಜೆಟ್ಟನ್ನು ತಂದು ಅಲ್ಲಿ ಪಾಸುಮಾಡಲು ಅವಕಾಶ ಮಾಡಿಕೊಡಬೇಕು ಎಂದು ಕೆಲಸದಸ್ಯರಿಂದ ಮನವಿಗಳು ಬಂದವು. ಅಲ್ಲದೆ ಚರ್ಚೆಗೆ ಸಾಕಷ್ಟು ಅವಕಾಶಗಳೂ ಇರಬೇಕು ಎಂದು ಶನಿವಾರ ಮಾಡಲೇಬೇಕಾಗಿ ಬಂತು. ಇದರಲ್ಲಿ ಇನ್ನೊಂದು ತೊಂದರೆ ಬಂದುದು ಯುಗಾದಿ ಹಬ್ಬ ಬಂದಿದೆ. ಇದಕ್ಕಾಗಿ ಎಲ್ಲ ಸದಸ್ಯರುಗಳೂ ಹಬ್ಬಕ್ಕೆ ಊರಿಗೆ ಹೋಗಬೇಕಾಗುತ್ತೆ, ಎಂದು ಚರ್ಚೆಗೆ ಬಂದುದರಿಂದ 22ನೇ ತಾರೀಖು ಶನಿವಾರ ಒಂದು ದಿನವೂ ಈ ಸಭೆಯಲ್ಲಿ ಚರ್ಚೆಗೆ ಅವಕಾಶಮಾಡಿಕೊಡಬೇಕು ಎಂದು ಕಾರಣಾವಕಾಶ ಕೊಡಲಾಗಿದೆ. ಇದನ್ನು ವಿಧಿ ಇಲ್ಲದೆ ಒಪ್ಪಿಕೊಳ್ಳಬೇಕಾಗಿ ಬಂತು. ಆದುದರಿಂದ ಇಲ್ಲಿ ಬಂದಿರುವ ಬಿಸಿನೆಸ್ ಅಡ್ವೈಸರಿ ಕಮಿಟಿಯ ವರದಿಯಂತೆ ನಾವು ಸ್ವಲ್ಪ ಬದಲಾವಣೆ ಮಾಡಿರುವುದಕ್ಕಾಗಿ ತಮ್ಮ ಕ್ಷಮಾಪಣೆ ಕೇಳುತ್ತೇನೆ. ಇದನ್ನು ಹಾಗೇ ಒಪ್ಪಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—The question is:

"That the Assembly agrees with the Fourteenth Report of the Business Advisory Committee."

The motion was adopted.

Mr. SPEAKER.—The report is adopted.

Sri B. P. GANGADHAR.—Sir, I had sent a notice in respect of high-way robbery in Makalidurga on Monday night.

Mr. SPEAKER.—I will look into that. I call upon Hon. Member Sri C. M. S. Sastry to speak on Demands for Grants.

Budget Estimates for 1969-70

DEMANDS FOR GRANTS—DEMANDS NOS. 10, 12 AND 13

(Debate continued)

† ಶ್ರೀ ಸಿ. ಎಂ. ಎಸ್. ಶಾಸ್ತ್ರಿ (ಚಿಕ್ಕಮಗಳೂರು).—ಮಾನ್ಯ ಅಧ್ಯಕ್ಷರೇ, 1969-70ನೇ ಸಾಲಿಗೆ ಸಾಮಾನ್ಯ ಆಡಳಿತ ಇಲಾಖೆಗೆ ನಮ್ಮ ಮುಂದೆ ಇಟ್ಟಿರುವ ಬಡ್ಜೆಟ್ಟಿನಲ್ಲಿ ರೂಪಾಯಿ 4,48,45,000 ಎಂದು ಇಟ್ಟಿರುವ ಬೇಡಿಕೆಯನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ.